**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01**

ಸಂಖ್ಯೆ:ಸಿ8[7]ಶಾಶಿಅ ಮಾ ನ /1/2015–16 ದಿನಾಂಕ: 11.09.2018

**ಜ್ಞಾಪನ**

ವಿಷಯ:–ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ 2018–19ನೇ ಸಾಲಿನಿಂದ ಮಾನ್ಯತೆ ನವೀಕರಣವನ್ನು ಆನ್‌ಲೈನ್ ತಂತ್ರಾಂಶದಲ್ಲಿ ಮಾಡಲು ಕ್ರಮ ವಹಿಸುವ ಬಗ್ಗೆ.

ಉಲ್ಲೇಖ:1]ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಸೂಚನೆ ಮೇರೆಗೆ.

2]ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ಮಾನ್ಯತೆ ನಿಯಮಗಳು 1999[ಸರ್ಕಾರದ ಆದೇಶ ಸಂಖ್ಯೆ: ಇಡಿ 131 ವಿವಿಧ 98 ದಿನಾಂಕ: 04.11.1999]

3]ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಮಾನ್ಯತೆ ನಿಯಮಗಳು][ತಿದ್ದುಪಡಿ] ನಿಯಮಗಳು ಸರ್ಕಾರದ ಆದೇಶ ಸಂಖ್ಯೆ: ಇಡಿ 709 ಐಜಿಸಿ 2017 ದಿನಾಂಕ: 07.03.2018

------****------

ರಾಜ್ಯದಲ್ಲಿನ ಅನುದಾನಿತ ಪ್ರಾಥಮಿಕ/ಪ್ರೌಢಶಾಲೆಗಳ ಮಾನ್ಯತೆ ನವೀಕರಣವನ್ನು ಉಲ್ಲೇಖ–3ರ ಸರ್ಕಾರದ ದಿನಾಂಕ: 07.03.2018ರ ನಿಯಮ–4ರಂತೆ ಆನ್ ಲೈನ್ ತಂತ್ರಾಂಶದಲ್ಲಿ ಮಾಡುವುದು ಕಡ್ಡಾಯವಾಗಿರುತ್ತದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ–36ರಂತೆ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಆಯಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಆಯಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾನ್ಯತೆ ನವೀಕರಣ ಪ್ರಾಧಿಕಾರಿಗಳಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈಗಾಗಲೇ ಈ ಕಛೇರಿಯಿಂದ ಮಾನ್ಯತೆ ನವೀಕರಣವನ್ನು Online ತಂತ್ರಾಂಶದಲ್ಲಿ ಮಾಡುವ ವಿಚಾರದಲ್ಲಿ ಎಲ್ಲಾ ಅನುದಾನಿತ/ಅನುದಾನ ರಹಿತ ಪ್ರಾಥಮಿಕ/ಪ್ರೌಢಶಾಲೆಗಳಲ್ಲಿ 3 Data base Formet ರವಾನಿಸಲಾಗಿದೆ, ಅದರಂತೆ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿರುವ ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿವರಗಳನ್ನು ಮೊದಲಿಗೆ ಡೇಟಾ ಬೇಸ್ ಫಾರ್ಮೆಟ್‌ನಲ್ಲಿ ಮಾಹಿತಿಯನ್ನು ಭರ್ತಿ ಮಾಡಬೇಕಾಗಿರುತ್ತದೆ.

**<u>ಅನುಬಂಧ–01ರಲ್ಲಿ ಆಡಳಿತ ಮಂಡಳಿಯ ವಿವರದ ಬಗ್ಗೆ ಮಾಹಿತಿ</u>**

ಆನ್ ಲೈನ್ ತಂತ್ರಾಂಶದಲ್ಲಿ ಮೊದಲಿಗೆ ಎಲ್ಲಾ ಅನುದಾನಿತ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಆಡಳಿತ ಮಂಡಳಿಗಳ ವಿವರಗಳನ್ನು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಪಡೆಯಬೇಕಾಗಿದೆ. ಈ ಸಂಬಂಧ ಆಯಾ ಆಡಳಿತ ಮಂಡಳಿಯವರು ಭರ್ತಿ ಮಾಡಬೇಕಾದ ವಿವರಗಳ ನಮೂನೆಯನ್ನು ಈಗಾಗಲೇ ಸಂಬಂಧಪಟ್ಟ ಆಡಳಿತ ಮಂಡಳಿಯವರ ಲಾಗಿನ್ ಗೆ ಈ ಕಛೇರಿಯಿಂದ ಕಳುಹಿಸಲಾಗಿದೆ.

**<u>ಅನುಬಂಧ–2ರಲ್ಲಿ ಅನುದಾನಿತ/ಅನುದಾನ ರಹಿತ ಪ್ರಾಥಮಿಕ/ ಪ್ರೌಢಶಾಲೆಗಳ ಮಾನ್ಯತೆ ಬಗ್ಗೆ ಮಾಹಿತಿ</u>**

ಅನುಬಂಧ–2ರಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮಾನ್ಯತೆ ಪಡೆದಿರುವ ಬಗ್ಗೆ ಮಾಹಿತಿ ಪಡೆಯಲು sats ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರು. ಅನುದಾನಿತ / ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮಾನ್ಯತೆಯ ಮಾಹಿತಿಯನ್ನು ಸಂಬಂದಿಸಿದ ಶಾಲಾ ಮುಖ್ಯಸ್ಥರಿಂದ ಭರ್ತಿ ಮಾಡಿಸಿ ಧೃಢೀಕರಿಸಲು ಸೂಚಿಸಿದೆ.

**ಅನುಬಂಧ–3ರಲ್ಲಿ ಇಲ್ಲಿಯವರೆಗೆ ಮಾನ್ಯತೆ ನವೀಕರಣ ಆಗದೇ ಇರುವ ಶಾಲೆಗಳ ಮಾನ್ಯತೆ ನವೀಕರಿಸುವ ಬಗ್ಗೆ**

ಅನುಬಂಧ–3ರಲ್ಲಿ ಮಾಹಿತಿಯನ್ನು ಭರ್ತಿ ಮಾಡುವ ಬಗ್ಗೆ sats ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗುವುದು. ಅದರಂತೆ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮವಹಿಸುವುದು.

ಮೇಲೆ ತಿಳಿಸಿರುವ ಮಾಹಿತಿಗಳನ್ನು ಆನ್ ಲೈನ್ ತಂತ್ರಾಂಶದ ಮೂಲಕ ದಿನಾಂಕ: 30.09.2018ರೊಳಗೆ ಕ್ರಮ ವಹಿಸತಕ್ಕದ್ದು. ಈ ದಿನಾಂಕದೊಳಗೆ ಈ ಕ್ರಮ ವಹಿಸಲು ವಿಫಲವಾದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

ಈಗಾಗಲೇ ತಿಳಿಸಿದಂತೆ ಆಡಳಿತ ಮಂಡಳಿಯವರು ಶಾಲೆಗಳ ಮಾನ್ಯತೆ ನವೀಕರಣ ವಿವರಗಳನ್ನು ಆಧರಿಸಿಯೇ Online ತಂತ್ರಾಂಶದಲ್ಲಿ ಮಾನ್ಯತೆ ನವೀಕರಣದ ಬಗ್ಗೆ ಮುಂದಿನ ಕ್ರಮ ವಹಿಸಬೇಕಾಗಿರುವುದರಿಂದ ಈ ಬಗ್ಗೆ ವೈಯಕ್ತಿಕ ಗಮನಹರಿಸಿ ಕ್ರಮ ವಹಿಸಲು ತಿಳಿಸಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

ನಿರ್ದೇಶಕರು [ಪ್ರೌಢ ಶಿಕ್ಷಣ]

**ಇವರಿಗೆ**

**ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳು.**

\\10.96.135.73\F drive\sslc exam.doc